# ಅಡುಗೆ ಧ್ಯಾನ ಬದುಕು ಚಿನ್ನ

ಕರಾವಳಿಯ ಹಳ್ಳಿ ಹುಡುಗನೊಬ್ಬ ಕನಸುಗಳ ದಾರಿಯಲ್ಲಿ ಬೆಂಗಳೂರಿಗೆ ಬಂದು, ಅಡುಗೆಯನ್ನು ಧ್ಯಾನಿಸುತ್ತ ಬದುಕನ್ನು ಕಂಡುಕೊಂಡ ಈ ಕಥನದಲ್ಲಿ ಹೊಸ ತಲೆಮಾರಿನ ಯುವಕ ಯುವತಿಯರಿಗೊಂದು ಪ್ರೇರಣೆಯ ಹೊಳಹಿದೆ.

■ ಜ್ಯೋತಿ ಇರ್ವತ್ತೂರು



**ಮಾಸ್ಟರ್ ಶೆಫ್ ಒಬ್ಬರ ಹೋರಾಟದ ಬದುಕಿನ ಕಥನ**

ಬಂಟ್ವಾಳದ ಗ್ರಾಮೀಣ ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಇಸ್ಮಾಯಿಲ್ ಹೋರಾಟದ ಹಾದಿಯಲ್ಲಿ ಮುನ್ನಡೆದು ಬದುಕನ್ನು ಕಟ್ಟಿಕೊಂಡಿರುವ ವಿಶಿಷ್ಟ ಸಾಧಕ.

ಮಕ್ಕಳಿರಲವ್ವ ಮನೆ ತುಂಬ ಎನ್ನುವ ಮಾತು ಇಸ್ಮಾಯಿಲ್ ಅವರ ಕುಟುಂಬಕ್ಕೆ ಅನ್ವಯಿಸುವಂತಿತ್ತು. ಅವರ ತಂದೆ–ತಾಯಿಗೆ ಹನ್ನೊಂದು ಮಕ್ಕಳು (ಈಗ ಉಳಿದಿರುವುದು ಒಂಬತ್ತು ಮಂದಿ ಮಾತ್ರ). ಮಕ್ಕಳು ಹೆಚ್ಚು ಎಂದಮೇಲೆ ಬದುಕಿನ ಬಂಡಿ ಸುಲಭವಾಗಿ ಸಾಗುವ ಮಾತೆಲ್ಲಿ ಬಂತು.

ಕುಟುಂಬ ನಿರ್ವಹಣೆಗಾಗಿ ಮತ್ತು ತನ್ನ ಓದಿಗಾಗಿ ಇಸ್ಮಾಯಿಲ್ ಬೀಡಿ ಕಟ್ಟಲು ಆರಂಭಿಸಿದರು. ರಾತ್ರಿ ನಿದ್ದೆಗೆಟ್ಟು ದಿನಕ್ಕೆ ಒಂದು ಸಾವಿರ ಬೀಡಿ ಕಟ್ಟುತ್ತಿದ್ದರು. ಕ್ರೀಡೆಗೆ ಒತ್ತು ಕೊಟ್ಟು ರಾಜ್ಯಮಟ್ಟದಲ್ಲೇನೋ ತೊಡಗಿಸಿಕೊಂಡರು. ಆದರೆ, ಒಂಬತ್ತನೇ ತರಗತಿಯಲ್ಲಿ ಫೇಲ್ ಆದ್ರು. ಛಲ ಬಿಡದ ಇಸ್ಮಾಯಿಲ್, ತಮ್ಮ ವಿದ್ಯಾಭ್ಯಾಸದ ಖರ್ಚನ್ನು ತಮ್ಮ ಗಳಿಕೆಯಿಂದಲೇ ಭರಿಸಿ, ಹತ್ತನೇ ತರಗತಿಯಲ್ಲಿ ಉತ್ತೀರ್ಣರೂ ಆದರು.

ಬಡತನದ ಬೇಗೆಯಿಂದ ಇಸ್ಮಾಯಿಲ್ ಅವರಿಗೆ ಕಾಲೇಜು ಮೆಟ್ಟಿಲು ಹತ್ತಲಾಗಲಿಲ್ಲ. ಆದರೆ ಜೀವನದ ಅನುಭವ ಕಲಿಸುವ ಪಾಠದ ಕೊರತೆ ಅವರಿಗಿರಲಿಲ್ಲ.

ಇಸ್ಮಾಯಿಲ್ ಅವರ ತಂದೆ ವೃತ್ತಿಯಿಂದ ಮೇಸ್ತ್ರಿ. ಅವರು ಮಕ್ಕಳ ಕನಸನ್ನು ನನಸು ಮಾಡುವಷ್ಟು ಶಕ್ತರಾಗಿರಲಿಲ್ಲ. ಇದರ ನಡುವೆ ಪೊಲೀಸ್ ಅಧಿಕಾರಿಯಾಗಬೇಕೆಂಬ ಕನಸು ಇಸ್ಮಾಯಿಲ್ ಅವರನ್ನು ಕಾಡತೊಡಗಿತು. ಅದು ಕೈಗೂಡದ ಕನಸು ಎಂದು ಅರಿವಾದರೂ, ಜೀವನದಲ್ಲಿ ಏನನ್ನಾದರೂ ಸಾಧಿಸುವ ಆತ್ಮವಿಶ್ವಾಸ ಅವರಲ್ಲಿತ್ತು. ಬೀಡಿ ಕಟ್ಟುತ್ತಲೇ ಬದುಕನ್ನೂ ಕಟ್ಟಿಕೊಳ್ಳತೊಡಗಿದರು.

## ಕನಸುಗಳ ಬೆನ್ನೇರಿ ಬೆಂಗಳೂರಿಗೆ

ಬದುಕಿನಲ್ಲಿ ಹೊಸ ಬಣ್ಣಗಳನ್ನು ತುಂಬಿಕೊಳ್ಳುವ ಹಂಬಲದಲ್ಲಿ ಇಸ್ಮಾಯಿಲ್ ಮಂಗಳೂರಿನಿಂದ ಬೆಂಗಳೂರು ರೈಲು ಹತ್ತಿಯೇ ಬಿಟ್ರು. ಉಡುಪಿಯಲ್ಲಿ ಮೀನಿಗೆ ಐಸ್ ಹಾಕುತ್ತಿದ್ದ ಅಣ್ಣನೂ ಅವರಿಗೆ ಜೊತೆಯಾದರು. ಚಲಿಸುತ್ತಿರುವ ರೈಲು ತಮ್ಮ ಬದುಕಿನ ಚಲನೆಯೆಂದು ಅವರಿಗೆ ಅನ್ನಿಸುತ್ತಿತ್ತು.

ಬೀಡಿ ಕಟ್ಟಿ ಹಾಗೂ ಗೇರು ಬೀಜ ಮಾರಿ ಗಳಿಸಿದ್ದ ಅಲ್ಪ ಸ್ವಲ್ಪ ದುಡ್ಡು ಅಣ್ಣತಮ್ಮರ ಜೊತೆಗಿತ್ತು. ಆದರೆ, ಊಟದ ಪೊಟ್ಟಣ ಕಟ್ಟಿಸಿಕೊಂಡು ಹಣ ಕೊಡಬೇಕೆಂದು ಅಣ್ಣ ಜೇಬಲ್ಲಿ ತಡಕಾಡಿದರೆ ಜೇಬಿಗೆ ಕತ್ತರಿ ಬಿದ್ದಿತ್ತು. ಕಷ್ಟಪಟ್ಟು ಇಟ್ಟುಕೊಂಡಿದ್ದ 650 ರೂಪಾಯಿ ಕಳ್ಳತನವಾಗಿತ್ತು. ಊಟದ ಪೊಟ್ಟಣವನ್ನು ಹಾಗೆಯೇ ವಾಪಸ್ ಕೊಟ್ಟ ಸಹೋದರರ ಹೊಟ್ಟೆ ಹಸಿವಿನಿಂದಲೂ